**24ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು**

ಸಿಸಿ ನಂ.19088/2022

**ಪ್ರಾ.ಸಾಃ 5 ಚಾ.ಸಾಃ 8**

| | |
|---|---|
| ಸಾಕ್ಷಿದಾರರ ಹೆಸರು | ಮೀನಾಕ್ಷಿ |
| ಗಂಡನ ಹೆಸರು | ಅರುಣ್ |
| ವಯಸ್ಸು | 47 ವರ್ಷ |
| ಉದ್ಯೋಗ | ಎಸಿಪಿ, ರಾಜ್ಯಗುಪ್ತ ವಾರ್ತೆ |
| ವಿಳಾಸ | ಮಲ್ಲೇಶ್ವರಂ, ಬೆಂಗಳೂರು |

**ದಿನಾಂಕಃ 15.09.2026. ರಂದು ಸಾಕ್ಷಿಗೆ ಶಪಥ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅ ರವರಿಂದಃ**

ನಾನು ಜನವರಿ 2021 ರಿಂದ ಆಗಸ್ಟ್ 2022 ರ ವರೆಗೆ ಪಿ.ಐ.ಯಾಗಿ ಬಸವನಗುಡಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 23.03.2022 ರಂದು ಚಾಸಾ.7 ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲಿಸಿರುತ್ತೇನೆ. ಅದೇ ದಿನ ಆರೋಪಿ ನಂ1 ರಿಂದ 5 ರವರನ್ನು ಮಾನ್ಯ ಹಾಗೂ ಸತ್ರ ನ್ಯಾಯಾಲಯದಿಂದ ನಿರೀಕ್ಷಣ ಜಾಮೀನು ಪಡೆದುಕೊಂಡು ಹಾಜರಾಗಿದ್ದು ದಸ್ತಗಿರಿ ನಿಯಾಮವಳಿ ಪಾಲಿಸಿ ಬಿಡುಗಡೆ ಮಾಡಿರುತ್ತೇನೆ. ದಿಃ 18.04.2022 ರಂದು ಚಾಸಾ.2 ರಿಂದ 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 04.05.2022 ರಂದು ಪ್ರಕರಣದ ತನಿಖೆ ಮುಗಿದಿದ್ದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ ನಂ.1 ರಿಂದ 5 ರವರನ್ನು ನೋಡಿದರೆ ಗುರುತಿಸುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರರಿಂದಃ**

ಚಾಸಾ.2 ರವರು ತಮ್ಮ ಹೇಳಿಕೆಯಲ್ಲಿ ಆರೋಪಿತರು ಯಾವ ರೀತಿ ತಮಗೆ ಕಿರುಕುಳ ಕೊಟ್ಟಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಬಿಟ್ಟಿರುವುದಿಲ್ಲ ಎಂದು ಚಾಸಾ.2 ರವರು ತಮ್ಮ ಹೇಳಿಕೆಯಲ್ಲಿ ನೀಡಿರುವುದಿಲ್ಲ ಎಂದರೆ ಸರಿ. ಆರೋಪಿತರಿಗೆ ಒಡವೆಗಳನ್ನು ಕೊಟ್ಟಿದ್ದು ಅವುಗಳ ತೂಕದ ಬಗ್ಗೆ ಹೇಳಿಕೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ತನ್ನ ಮಗಳಿಗೆ ಆರೋಪಿತರು ಊಟವನ್ನು ಕೊಡುತ್ತಿರಲಿಲ್ಲ ಎಂದು ಹೇಳಿಕೆಯಲ್ಲಿ ಇರುವುದಿಲ್ಲ ಎಂದರೆ ಸರಿ. ಮೇಡಿಮಲ್ಲಸಂದ್ರದಲ್ಲಿ ಸೈಟ್ ಬೇಕೆಂದು ಕೇಳಿರುತ್ತಾರೆ ಎಂದು ಇರುವುದಿಲ್ಲ ಎಂದರೆ ಸಾಕ್ಷಿಯು ಊರು ಹೆಸರು ಇರುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಚಾಸಾ.3 ರವರು ಸಹ ತಮ್ಮ ಹೇಳಿಕೆಯಲ್ಲಿ ಆರೋಪಿತರು ಊಟವನ್ನು ಕೊಡುತ್ತಿರಲಿಲ್ಲ ಎಂದು ಹೇಳಿಕೆಯಲ್ಲಿ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ಚಾಸಾ.1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಬಿಟ್ಟಿರುವುದಿಲ್ಲ ಎಂದು ಚಾಸಾ.3 ರವರು ತಮ್ಮ ಹೇಳಿಕೆಯಲ್ಲಿ ನೀಡಿರುವುದಿಲ್ಲ ಎಂದರೆ ಸರಿ. ನಾನು ಚಾಸಾ.4 ರವರ ಹೇಳಿಕೆಯನ್ನು

ಪಡೆದುಕೊಂಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.4 ರವರ ಹೇಳಿಕೆಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಪರಾಧ ಮಾಡದೆ ಇದ್ದರೂ ಸಹ ಚಾಸಾ.1 ರವರಿಗೆ ಸಹಾಯ ಮಾಡಲು ಖೊಟ್ಟಿ ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾ.ದಲ್ಲಿ ನನ್ನ ಉತ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.ಓ**

**24ನೇ ಅ.ಮು.ಮ.ದಂ.ನ್ಯಾ.**